ಪ್ರತಿವರ್ಷದ ಪದ್ಧತಿಯಂತೆ ಬೇಸಿಗೆಯಲ್ಲಿ ಮನೆಗೆ ಬಂದಿದ್ದಳು ನೇತ್ರಾ, ಜನಾರ್ದನನ ಮುದ್ದಿನ ಮಗಳು. ಜೊತೆಯಲ್ಲಿ ಐದು ವರ್ಷ ತುಂಬಲಿರುವ ಮೊಮ್ಮಗ ಆದಿತ್ಯ. ಇನ್ನೇನು ಈ ವರ್ಷ ಸ್ಕೂಲಿಗೆ ಸೇರಲಿದ್ದಾನೆ ಹುಡುಗ. ನಿನ್ನೆ, ಮೊನ್ನೆ ಅವನು ಹುಟ್ಟಿದ ಹಾಗಿದೆ. ಆಗಲೇ ಸ್ಕೂಲಿಗೆ ಹೋಗುವಷ್ಟು ಬೆಳೆದು ನಿಂತಿದ್ದಾನೆ. ದಿನಕ್ಕೊಂದು ಚಂದದಿಂದ ಮಕ್ಕಳು ಬೆಳೆಯುವುದೇ ಒಂದು ಸೊಬಗು. ಸಂಭ್ರಮ. ಮಗುಚಿಕೊಳ್ಳುವ, ಹೊಟ್ಟೆ ಎಳೆಯುವ, ಅಂಬೆಗಾಲಿಕ್ಕುವ, ಕೂರುವ, ನಿಲ್ಲುವ ಸಹಜ ಪ್ರಕ್ರಿಯೆಗಳಲ್ಲಿ ಹೆತ್ತವರಿಗೆ ಹೊಸಲೋಕದ ಅನಾವರಣವಾದಂತಾ ಬೆರಗು. ಪ್ರಕೃತಿಸಹಜವಾಗಿ ನಡೆಯುವ ಈ ಕ್ರಿಯೆಗಳಲ್ಲಿ ಏನಾದರೂ ಲೋಪವಾದರೆ ಅದಕ್ಕಿಂತಾ ಶಾಪ ಇನ್ನಾವುದಿದೆ? ಉಗುಳು ನುಂಗುವಂತಾಗುತ್ತದೆ ಜನಾರ್ದನನಿಗೆ. ಗಂಟಲ ಸೆರೆ ಉಬ್ಬುತ್ತದೆ. ಜನಪದ ಕತೆಗಳಲ್ಲಿ ರಾಕ್ಷಸನ ಪ್ರಾಣ ಅನ್ನುವುದು ಏಳುಸಮುದ್ರದಾಚೆಯ ಕೀಳುಸಮುದ್ರದ ಒಂದು ಗುಹೆಯೊಳಗೆ ಪಂಜರದಲ್ಲಿರುವ ಒಂದು ಗಿಳಿಯಲ್ಲಿ ಅಡಗಿತ್ತೆನ್ನುವಂತಾ ಕತೆಗಳನ್ನು ಅವನು ಬಹಳಷ್ಟು ಕೇಳಿದ್ದಾನೆ. ತಾನು ಕೇಳಿದ್ದನ್ನು ಮಗಳ ಕಿವಿಗಳಿಗೆ ತಲುಪಿಸಿ ಕೃತಾರ್ಥನಾಗಿದ್ದಾನೆ. 'ಒಂದೂರಲ್ಲಿ ಒಬ್ಬ ರಾಜ, ರಾಜನಿಗೊಬ್ಬಳು ಮಗಳು' ಎಂದು ಕತೆ ಶುರುಮಾಡಿದರೆ ನೇತ್ರನ ಬಟ್ಟಲುಗಣ್ಣುಗಳು ಮತ್ತಷ್ಟು ಅರಳಿ ಬೆಳಕು ಚೆಲ್ಲುವಂತೆ ಮಿನುಗುತ್ತಿದ್ದುದು ಇನ್ನೂ ಅವನ ನೆನಪಿನಲ್ಲಿ ಹಸಿಹಸಿಯಾಗಿದೆ. ಕತೆ ಅಂದರೆ ಮೂಗು ಕುಯ್ಯಿಸಿಕೊಳ್ಳುತ್ತಿದ್ದಳು ಹುಡುಗಿ. ರಾತ್ರಿ ಮಲಗಿದಾಗ ಕಡ್ಡಾಯವಾಗಿ ಕತೆ ಹೇಳಲೇಬೇಕು. ಅಪ್ಪನ ಉಸಿರು ಮಗಳ ಮುಂಗುರುಳು ನೇವರಿಸುತ್ತಾ, ಮಗಳ ನಿಶ್ವಾಸ ಅಪ್ಪನ ಎದೆಗೆ ಕಚಗುಳಿ ಕೊಡುತ್ತಾ, ಹೂಂಗುಟ್ಟುತ್ತಾ, ಹೂಂಗುಟ್ಟುತ್ತಾ ಅದ್ಯಾವ ಮಾಯದಲ್ಲೋ ನಿದ್ದೆಗೆ ಜಾರಿಬಿಡುತ್ತಿತ್ತು ಕಂದ. ಅದೊಂದು ಸಂದರ್ಭ ಇವತ್ತಿಗೂ ನೆನಪಿದೆ ಜನಾರ್ದನನಿಗೆ. ನೆನೆಸಿಕೊಂಡಾಗಲೆಲ್ಲಾ ಈ ಪ್ರಸಂಗವನ್ನು ಹಂಚಿಕೊಂಡು ಗಂಡ, ಹೆಂಡತಿ ಸಡಗರಿಸುತ್ತಿದ್ದರು. ಅದೊಮ್ಮೆ ರಾಮಾಯಣದ ಕತೆ ಹೇಳುತ್ತಿದ್ದ ಜನಾರ್ದನ, ಏಳೆಂಟು ವರ್ಷದ ತನ್ನ ಪುಟ್ಟ ಮಗಳಿಗೆ. ಸೀತೆಯ ಚಂದವನ್ನು ಮಗಳಿಗೆ ವರ್ಣನೆ ಮಾಡುತ್ತಾ, ಮಾಡುತ್ತಾ, "ಸೀತೆ ಎಷ್ಟು ಚೆನ್ನಾಗಿದ್ಲೂಂತ

